

بسم اللهِ الرّحمٰن الرّحيم

# ಕೃತಜ್ಞತೆಯ ಕುರಿತು ಹಝ಼್ರತ್ ಮಸೀಹ್ ಮೌಊದ್(ಅ)ರ ಮಾದರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **21–08–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ಼್ರತ್ ಮಸೀಹ್ ಮೌಊದ್(ಅ) ತಮ್ಮ ಸಹಾಬಿಯರ ಗಮನವನ್ನು ಅಲ್ಲಾಹನ ಅನುಗ್ರಹಗಳಿಗೆ ಕೃತಜ್ಞತೆ ಸಲ್ಲಿಸುವುದರ ಕುರಿತು ಅತ್ಯಂತ ಆಳವಾಗಿ ಗಮನ ಸೆಳೆಯುತ್ತಿದ್ದರು. ಹಝ಼್ರತ್ ಪೀರ್ ಸಿರಾಜುಲ್ ಹಕ್ ಸಾಹಿಬ್ ನುಅ್‌ಮಾನಿ(ರ) ವಿವರಿಸುತ್ತಾರೆ: ಒಂದು ಸಂದರ್ಭದಲ್ಲಿ ಹಝ಼್ರತ್ ಮಸೀಹ್ ಮೌಊದ್(ಅ) ಮಿಯಾನ್ ಬಕ್ಷ್ ಸೌದಾಯಿರೊಂದಿಗಿನ ಜಗಳದ ಕುರಿತು ಅವರೊಡನೆ ವಿಚಾರಿಸಿದರು. ಆಗ ಹಝ಼್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳಿದರು: ಮತಿವಿಕಲ ಅಥವಾ ಹುಚ್ಚನ ಬಗ್ಗೆ ಪಾಪ–ಪುಣ್ಯದ ಲೆಕ್ಕವಿರುವುದಿಲ್ಲ, ಆದ್ದರಿಂದ ಅಂತಹ ವ್ಯಕ್ತಿಯೊಂದಿಗೆ ವಾದ ವಿವಾದ ಮಾಡುವ ಬದಲು ಉತ್ತಮವಾಗಿ ವರ್ತಿಸಬೇಕು. ಲೋಕ ಜನರು ಇಂತಹವರನ್ನು ದೇವೋನ್ಮತ್ತ, ವಲಿಯುಲ್ಲಾಹ್ ಮತ್ತು ಮಹಾಪುರುಷ ಎಂದು ಕರೆಯುತ್ತಾರೆ, ಅದು ತಪ್ಪು; ವಾಸ್ತವದಲ್ಲಿ ಇವರು ಅನೇಕ ಅನುಗ್ರಹಗಳಿಂದ ವಂಚಿತರಾಗಿರುತ್ತಾರೆ. ಅವರು ಬುದ್ಧಿ, ಮನಸ್ಸು, ಉಡುಪು, ತಿನ್ನುವ–ಕುಡಿಯುವ ರುಚಿ, ಪತ್ನಿ–ಮಕ್ಕಳು ಮತ್ತು ಅವರ ಪೋಷಣೆಯ ಅನುಗ್ರಹಗಳು, ಅಲ್ಲಾಹನನ್ನು ಗುರುತಿಸುವುದು ಮತ್ತು ಅರಿವುದು, ಅವನ ಅಸ್ತಿತ್ವ ಮತ್ತು ಗುಣಗಳ ಜ್ಞಾನ, ಪ್ರವಾದಿ ಮತ್ತು ಪ್ರವಾದಿಯರ ಘನತೆ ಹಾಗೂ ಅನುಸರಣೆ, ಪವಿತ್ರ ಖುರ್‌ಆನಿನ ಪಾರಾಯಣ, ಅದರ ಅರ್ಥಗಳು, ರಹಸ್ಯಗಳು, ಜ್ಞಾನಗಳು ಹಾಗೂ ಸೂಕ್ಷ್ಮತೆಗಳು, ಧರ್ಮಸಂಹಿತೆ ಮತ್ತು ವಿಧಾನ, ನಮಾಝ್, ಉಪವಾಸ, ಹಜ್ ಮತ್ತು ಝಕಾತಿನ ಪುಣ್ಯದ ಪ್ರಾಪ್ತಿ ಹಾಗೂ ಪದವಿಗಳು ಇತ್ಯಾದಿಗಳಿಂದೆಲ್ಲಾ ವಂಚಿತರಾಗಿರುತ್ತಾರೆ.

ಹಝ಼್ರತ್ ಮಸೀಹ್ ಮೌಊದ್(ಅ) ಹೇಳಿದರು: ಇಂತಹ ಜನರನ್ನು ನೋಡಿ ಅವರೊಡನೆ ತರ್ಕಿಸುವ ಬದಲು, ಅಲ್ಲಾಹನು ನಮ್ಮನ್ನು ಈ ಅನುಗ್ರಹಗಳಿಂದ ವಂಚಿತರನ್ನಾಗಿಸಿಲ್ಲ ಎಂಬುದಕ್ಕೆ ಅವನಿಗೆ ಕೃತಜ್ಞತೆ ಸಲ್ಲಿಸಬೇಕು. ನಮಗೆ ಬುದ್ಧಿಯನ್ನು ಕರುಣಿಸಿದ್ದಾನೆ, ಪವಿತ್ರ ಖುರ್‌ಆನಿನ ಪಾರಾಯಣ ಮತ್ತು ಅದರ ಜ್ಞಾನ, ರಹಸ್ಯಗಳು, ಅರಿವು ಮತ್ತು ಸೂಕ್ಷ್ಮತೆಗಳಿಂದ ನಮ್ಮನ್ನು ತುಂಬಿಸಿದ್ದಾನೆ, ಹಲಾಲ್ ಮತ್ತು ಹರಾಮಿನ ಅರಿವು ನೀಡಿದ್ದಾನೆ, ರಸೂಲರನ್ನು ಗುರುತಿಸುವ ಸೌಭಾಗ್ಯ ದಯಪಾಲಿಸಿದ್ದಾನೆ ಹಾಗೂ ತನ್ನ ಅಸ್ತಿತ್ವ ಮತ್ತು ಗುಣಗಳ ಜ್ಞಾನವನ್ನು ದಯಪಾಲಿಸಿದ್ದಾನೆ. ಹಾಗಾಗಿ ಪ್ರತಿಯೊಬ್ಬ ಅಹ್ಮದಿಯೂ ತಾನು ಅಲ್ಲಾಹನ ಕೃತಜ್ಞತೆಯ ಹಕ್ಕನ್ನು ಎಷ್ಟರ ಮಟ್ಟಿಗೆ ಪೂರೈಸುತ್ತಿದ್ದೇನೆ ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕು.

ಇದೇ ಕೃತಜ್ಞತೆಯ ಅತ್ಯಂತ ಪ್ರಭಾವಶಾಲಿ ಘಟನೆಯೊಂದನ್ನು ಹಝ಼್ರತ್ ಮಲಿಕ್ ಮುಹಮ್ಮದ್ ಹಸನ್ ಮುಹಮ್ಮದ್ ಸಾಹಿಬ್ ವಿವರಿಸುತ್ತಾರೆ. ಹಝ಼್ರತ್ ಮಸೀಹ್ ಮೌಊದ್(ಅ) ಫಜ್ರ್ ನಮಾಝ್‌ಗಾಗಿ ಬಂದಾಗ, ನಮಾಝಿನ ನಂತರ ಸೇವಕರೊಡನೆ ಹೀಗೆ ಕೇಳಿದರು: 'ರಾತ್ರಿ ತಂತಿ ವಾದ್ಯ ಮತ್ತು ತಂಬೂರಿಯ ಧ್ವನಿ ಎಲ್ಲಿಂದ ಕೇಳಿಬರುತ್ತಿತ್ತು.' ಆಗ ಹಝ಼್ರತ್ ಮಸೀಹ್ ಮೌಊದ್(ಅ)ರಿಗೆ ಹೀಗೆ ತಿಳಿಸಲಾಯಿತು: ಮಿರ್ಝಾ ನಿಝಾಮುದ್ದೀನ್ ಸಾಹಿಬ್ ನರ್ತಕಿಯನ್ನು ಕರೆಸಿದ್ದರು ಮತ್ತು ರಾತ್ರಿಗೆ ಇಪ್ಪತ್ತು ರೂಪಾಯಿಗಳ ವಾಗ್ದಾನ ಮಾಡಿದ್ದರು, ಹಾಗಾಗಿ ಆಕೆ ಇಡೀ ರಾತ್ರಿ ನೃತ್ಯ ಮಾಡುತ್ತಿದ್ದಳು ಮತ್ತು ಹಾಡುತ್ತಿದ್ದಳು. ಹಝ಼್ರತ್ ಮಸೀಹ್ ಮೌಊದ್(ಅ) ದೀರ್ಘವಾದ ನಿಟ್ಟುಸಿರು ಬಿಟ್ಟು ಹೀಗೆ ಹೇಳಿದರು: "ಅಲ್ಲಾಹ್! ಈಕೆ ತಾನು ಪಡೆದ ಹಣಕ್ಕೆ ಎಷ್ಟು ನಿಷ್ಠೆ ತೋರಿಸುತ್ತಿದ್ದಾಳೆ." ಅಂದರೆ ಆ ಮಹಿಳೆ ಇಪ್ಪತ್ತು ರೂಪಾಯಿಗಳಿಗಾಗಿ ಇಡೀ ರಾತ್ರಿ ಎಚ್ಚರವಿದ್ದಳು, ಆದರೆ ನಮಗೆ ಅಸಂಖ್ಯಾತ ಅನುಗ್ರಹಗಳನ್ನು ದಯಪಾಲಿಸಿದ ನಮ್ಮ ನೈಜ ಸೃಷ್ಟಿಕರ್ತ ಮತ್ತು ಒಡೆಯನಿಗಾಗಿ ನಾವು ಒಂದೆರಡು ಗಂಟೆಗಳ ಕಾಲವೂ ಎಚ್ಚರವಿರಲು ಸಾಧ್ಯವಿಲ್ಲವೇ? ಹಝ಼್ರತ್ ಮಸೀಹ್ ಮೌಊದ್(ಅ) ಈ ಮಾತನ್ನು ಹಲವು ಬಾರಿ ಪುನರಾವರ್ತಿಸಿದರು ಮತ್ತು ನಾವು ಅಲ್ಲಾಹನ ಅಸಂಖ್ಯಾತ ಅನುಗ್ರಹಗಳ ಕೃತಜ್ಞತೆ ಸಲ್ಲಿಸುವುದಿಲ್ಲ, ನಫಲ್ ನಮಾಝ್ ಹಾಗೂ ಕಡ್ಡಾಯ ನಮಾಝ್‌ಗಳತ್ತ ಗಮನ ಹರಿಸುವುದಿಲ್ಲ. ಫಜ್ರ್ ನಮಾಝ್‌ಗಾಗಿ ಏಳುವುದು ಕೂಡ ನಮಗೆ ಕಷ್ಟವಾಗುತ್ತದೆ.

(ಹುಝೂರ್ ಹೇಳಿದರು:) ಹಾಗಾಗಿ ನಾವು ಎಷ್ಟರಮಟ್ಟಿಗೆ ಅಲ್ಲಾಹನ ಕೃತಜ್ಞತೆಯ ಹಕ್ಕನ್ನು ಪೂರೈಸುತ್ತಿದ್ದೇವೆ ಎಂದು ಪ್ರತಿಯೊಬ್ಬ ಅಹ್ಮದಿಯೂ ಸ್ವತಃ ನೋಡಬೇಕು.

ಹಝ್ರ್‌ರತ್ ಶೇಖ್ ಮುಹಮ್ಮದ್ ಇಸ್ಮಾಯಿಲ್ ಸರ್ದಾವಿ ಸಾಹಿಬ್ ವಿವರಿಸುತ್ತಾರೆ: ಹಝ್ರ್‌ರತ್ ಮಸೀಹ್ ಮೌಊದ್[ಅ]ರ ಅಭ್ಯಾಸವೇನೆಂದರೆ ಊಟ ಮಾಡುವಾಗ 'ಸುಬ್‌ಹಾನಲ್ಲಾಹ್', 'ಅಲ್‌ಹಮ್ದುಲಿಲ್ಲಾಹ್' ಎಂದು ಹೇಳುತ್ತಿದ್ದರು ಮತ್ತು ಏನನ್ನೋ ಹುಡುಕುತ್ತಿರುವಂತೆ ತಿನ್ನುತ್ತಿದ್ದರು. ಹಝ್ರ್‌ರತ್ ಮುಸ್ಲಿಹ್ ಮೌಊದ್[ರ] ಸಹ ಹೀಗೆ ವಿವರಿಸಿದ್ದಾರೆ: ಹಝ್ರ್‌ರತ್ ಮಸೀಹ್ ಮೌಊದ್[ಅ] ರೊಟ್ಟಿಯ ಸಣ್ಣ ತುಂಡನ್ನು ಬಾಯಿಯಲ್ಲಿ ಹಾಕಿಕೊಂಡು ಚೆನ್ನಾಗಿ ಜಗಿಯುತ್ತಿದ್ದರು, ದೊಡ್ಡ ತುತ್ತು ತೆಗೆದುಕೊಳ್ಳುತ್ತಿರಲಿಲ್ಲ ಮತ್ತು ಅದರ ಜೊತೆಗೆ 'ಸುಬ್‌ಹಾನಲ್ಲಾಹ್, ಸುಬ್‌ಹಾನಲ್ಲಾಹ್' ಎಂದು ಹೇಳುತ್ತಿದ್ದರು. ರೊಟ್ಟಿಯ ತುಂಡನ್ನು ಪದಾರ್ಥ ಸೇರಿಸಿ ತಿನ್ನುತ್ತಿದ್ದರು. ಹೀಗೆ ಊಟದಂತಹ ಸಾಮಾನ್ಯವೆಂದು ತೋರುವ ಅನುಗ್ರಹದಲ್ಲೂ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುವುದು ಎದ್ದು ಕಾಣುತ್ತಿತ್ತು.

ಹಝ್ರ್‌ರತ್ ಸೈಯಿದ್ ಝೈನುಲ್ ಆಬಿದೀನ್ ವಲಿಯುಲ್ಲಾಹ್ ಶಾಹ್ ಸಾಹಿಬ್ ವಿವರಿಸುತ್ತಾರೆ: ಪ್ರದೇಶ ಅಥವಾ ನಗರದಲ್ಲಿ ಪ್ಲೇಗ್ ಮಹಾಮಾರಿ ಕಾಣಿಸಿಕೊಳ್ಳುವಾಗ ಹಝ್ರ್‌ರತ್ ಮಸೀಹ್ ಮೌಊದ್[ಅ] ತಮ್ಮ ಮನೆ, ಬೋರ್ಡಿಂಗ್ ಹೌಸ್ ಮತ್ತು ಎಲ್ಲ ಸ್ನೇಹಿತರ ಮನೆಗಳ ಸ್ವಚ್ಛತೆಗೆ ವ್ಯವಸ್ಥೆ ಮಾಡುತ್ತಿದ್ದರು. ಗಂಧಕ, ಬೆಂಕಿ, ಫಿನಾಯಿಲ್ ಹಾಗೂ ಗುಗ್ಗುಲ ಇತ್ಯಾದಿಗಳಿಂದ ರೋಗಾಣುಗಳನ್ನು ನಾಶಮಾಡುವಂತೆ ತಾಕೀತು ಮಾಡುತ್ತಿದ್ದರು. ಹಝ್ರ್‌ರತ್ ಮಸೀಹ್ ಮೌಊದ್[ಅ] ಹೇಳುತ್ತಿದ್ದರು: ಲೌಕಿಕ ಸಾಧನಗಳ ಬಳಕೆಯು ಕೂಡ ಅಲ್ಲಾಹನ ಅನುಗ್ರಹಕ್ಕೆ ಕೃತಜ್ಞತೆ ಸಲ್ಲಿಸುವುದಾಗಿದೆ. ರೋಗಗಳು ಮತ್ತು ಸಾಂಕ್ರಾಮಿಕ ರೋಗಗಳ ದುಷ್ಪರಿಣಾಮಗಳನ್ನು ನಿವಾರಿಸಲು ಸಾಧನವಾಗುವಂತಹ ವಸ್ತುಗಳನ್ನು ಅಲ್ಲಾಹನು ಸೃಷ್ಟಿಸಿದ್ದಾನೆ. ಆದ್ದರಿಂದ ಲೌಕಿಕ ಸಾಧನಗಳನ್ನು ತ್ಯಜಿಸುವುದು ದೈವಿಕ ನಿಯಮಕ್ಕೆ ವಿರುದ್ಧವಾಗಿದೆ. ತವಕ್ಕುಲ್‌ನ (ದೇವನ ಮೇಲಿನ ಭರವಸೆ) ಸ್ಥಾನವು ಇದರ ನಂತರ ಬರುತ್ತದೆ; ಸಾಧನಗಳ ನೆರವು ಪಡೆದ ನಂತರ ಕೇವಲ ಅವುಗಳ ಮೇಲೆಯೇ ಅವಲಂಬಿತರಾಗಬಾರದು, ಬದಲಾಗಿ ಸಾಧನಗಳ ಹಿಂದೆ ಇರುವ ದೇವನ ಕೈಯನ್ನು ನೋಡಬೇಕು.

ಹಝ್ರ್‌ರತ್ ಮುಹಮ್ಮದ್ ಇಬ್ರಾಹೀಮ್ ಸಾಹಿಬ್[ರ] ಘಟನೆಯೊಂದನ್ನು ವಿವರಿಸುತ್ತಾರೆ: 1904ರಲ್ಲಿ 'ಕರಮ್‌ದೀನ್ ಮೊಕದ್ದಮೆ'ಯ ಹಿನ್ನೆಲೆಯಲ್ಲಿ ಗುರುದಾಸ್‌ಪುರದಲ್ಲಿ ತಂಗಿದ್ದಾಗ ಸ್ನೇಹಿತರೊಬ್ಬರು ಹಣ್ಣಾದ ಖರ್ಜೂರಗಳನ್ನು ತಂದರು. ಅದು ಉಷ್ಣ ಗುಣವುಳ್ಳದ್ದು ಎಂದು ಯಾರೋ ಹೇಳಿದಾಗ, ಈರುಳ್ಳಿ ತಿನ್ನುವುದರಿಂದ ಅದರ ಪರಿಣಾಮವು ತೊಲಗುತ್ತದೆ ಎಂದು ಹೇಳಲಾಯಿತು. ಹಝ್ರ್‌ರತ್ ಮಸೀಹ್ ಮೌಊದ್[ಅ] ಹೀಗೆ ಹೇಳಿದರು: ಅಲ್ಲಾಹನು ಎಂತಹ ಉತ್ತಮ ವ್ಯವಸ್ಥೆ ಮಾಡಿದ್ದಾನೆಂದರೆ, ಪ್ರತಿಯೊಂದು ವಸ್ತುವಿನ ದೋಷನಿವಾರಕ ಸಹ ಅಸ್ತಿತ್ವದಲ್ಲಿದೆ. ಮಾವು ಹಾಗೂ ನೇರಳೆ, ಮತ್ತು ಬಾಳೆಹಣ್ಣು ಹಾಗೂ ಹಸಿ ಅಕ್ಕಿಯ ಉದಾಹರಣೆಗಳನ್ನು ಹಝ್ರ್‌ರತ್ ಮಸೀಹ್ ಮೌಊದ್[ಅ] ವಿವರಿಸಿದರು; ಮನುಷ್ಯನಿಗಾಗಿ ಅಲ್ಲಾಹನ ಅತ್ಯುನ್ನತ ಆಧ್ಯಾತ್ಮಿಕ ಹಾಗೂ ದೈಹಿಕ ವ್ಯವಸ್ಥೆಗಳನ್ನು ಪ್ರಸ್ತಾಪಿಸುತ್ತಾ, ಮನುಷ್ಯನು ಇವುಗಳಿಗೆ ಕೃತಜ್ಞತೆಯನ್ನು ಕೂಡ ಸಲ್ಲಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಹಝ್ರ್‌ರತ್ ಮಸೀಹ್ ಮೌಊದ್[ಅ] ಕಾಯಿಲೆಯಿಂದ ಗುಣಮುಖರಾದಾಗ ಸಹ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿದರು. 'ತಝ್‌ಕಿರತುಶ್ಶಹಾದತೈನ್' ಪುಸ್ತಕ ಬರೆಯುವಾಗ ಹಝ್ರ್‌ರತ್ ಮಸೀಹ್ ಮೌಊದ್[ಅ]ರಿಗೆ ತೀವ್ರವಾದ ಮೂತ್ರಪಿಂಡದ ನೋವು ಕಾಣಿಸಿಕೊಂಡಿತು. ಪ್ರಾಯಶಃ ಈ ಪುಸ್ತಕ ಪೂರ್ಣಗೊಳ್ಳದಿರಬಹುದು ಎಂದು ಅವರು ಭಾವಿಸಿದರು. ರಾತ್ರಿ ಅವರು ಮನೆಯವರನ್ನು ಒಟ್ಟುಗೂಡಿಸಿ ದುಆ ಮಾಡಿದರು. ಸಾಹಿಬ್‌ಝಾದಾ ಮೌಲ್ವಿ ಅಬ್ದುಲ್ ಲತೀಫ್‌ರ ಬಗ್ಗೆ ಯೋಚಿಸುತ್ತಾ ಅಲ್ಲಾಹನು ಈ ಪುಸ್ತಕವನ್ನು ಪೂರ್ಣಗೊಳಿಸಲು ಸೌಭಾಗ್ಯ ಕರುಣಿಸಲಿ ಎಂದು ಪ್ರಾರ್ಥಿಸಿದರು. ದುಆ ಮಾಡಿದ ನಂತರ ಹಝ್ರ್‌ರತ್ ಮಸೀಹ್ ಮೌಊದ್[ಅ]ರ ಮೇಲೆ ಅರೆನಿದ್ರೆಯ ಸ್ಥಿತಿ ಉಂಟಾಯಿತು ಮತ್ತು ಹೀಗೆ ದಿವ್ಯವಾಣಿ ಉಂಟಾಯಿತು: **"ಸಲಾಮುನ್ ಕೌಲಮ್ಮಿರ್ರಬ್ಬಿರ್ರಹೀಮ್"**. ಮುಂಜಾನೆ ಆರು ಗಂಟೆಯ ಮುನ್ನವೇ ಹಝ್ರ್‌ರತ್ ಮಸೀಹ್ ಮೌಊದ್[ಅ] ಸಂಪೂರ್ಣವಾಗಿ ಗುಣಮುಖರಾದರು ಮತ್ತು ಅದೇ ದಿನ ಬಹುತೇಕ ಅರ್ಧ ಪುಸ್ತಕವನ್ನು ಬರೆದರು. ಕೊನೆಯಲ್ಲಿ ಹೀಗೆ ಹೇಳಿದರು: **ಫಲ್‌ಹಮ್ದುಲಿಲ್ಲಾಹಿ ಅಲಾ ಧಾಲಿಕ್**.

ಹಝ್ರ್‌ರತ್ ಮಸೀಹ್ ಮೌಊದ್[ಅ] ಬರಾಹೀನೇ ಅಹ್ಮದಿಯಾದ ರಚನೆ ಮತ್ತು ಪ್ರಕಟಣೆಯಲ್ಲಿ ಆರ್ಥಿಕ ನೆರವು ನೀಡಿದವರ ಹೆಸರುಗಳನ್ನೂ ದಾಖಲಿಸಿದರು ಮತ್ತು ಅವರಿಗಾಗಿ ದುಆ ಮಾಡಲು ಮನವಿ ಮಾಡಿದರು. ಈ ಸಹಾಯಕರ ಪೈಕಿ ಐದು ರೂಪಾಯಿ, ಎರಡು ರೂಪಾಯಿ, ಎರಡು ಆಣೆ ನೀಡಿದವರೂ ಸಹ ಇದ್ದರು. ಹಝ್ರ್‌ರತ್ ಮಸೀಹ್ ಮೌಊದ್[ಅ] ಆ ಎಲ್ಲ ಸಹಾಯಕರಿಗೂ ಕೃತಜ್ಞತೆ ಸಲ್ಲಿಸುತ್ತಾ ಹೀಗೆ ಹೇಳಿದರು: ಅವರ ಕರುಣಾಮಯ ಗಮನದಿಂದಾಗಿ ಧಾರ್ಮಿಕ ಉದ್ದೇಶಗಳು ನಷ್ಟವಾಗುವುದರಿಂದ ಮತ್ತು ಪರಿಶ್ರಮಗಳು ವ್ಯರ್ಥವಾಗುವುದರಿಂದ ಸುರಕ್ಷಿತವಾಯಿತು. ಈ ಪುಸ್ತಕದಿಂದ ಪ್ರಯೋಜನ ಪಡೆಯುವವರು ಹಝ್ರ್‌ರತ್ ಮಸೀಹ್ ಮೌಊದ್[ಅ]ರಿಗಾಗಿ ಹಾಗೂ ಸಹಾಯಕರಿಗಾಗಿ ದುಆ ಮಾಡಲಿ ಎಂಬ ಕಾರಣಕ್ಕಾಗಿಯೂ ಅವರ ಹೆಸರುಗಳನ್ನು ದಾಖಲಿಸಲಾಗಿತ್ತು.

ಹಝ್ರತ್ ಮಿಯಾನ್ ಮಂಝ್ಝೂರ್ ಮುಹಮ್ಮದ್ ಸಾಹಿಬ್‌ರನ್ನು ಪ್ರಸ್ತಾಪಿಸುತ್ತಾ, ಅವರ ಕೈಬರಹ ಸೇವೆ ಮತ್ತು ನಿಷ್ಠೆಗಾಗಿ ಹಝ್ರತ್ ಮಸೀಹ್ ಮೌಊದ್[ಅ] ಕೃತಜ್ಞತೆ ಸಲ್ಲಿಸಿದರು. ಹಝ್ರತ್ ಮಸೀಹ್ ಮೌಊದ್[ಅ] ಹೇಳಿದರು: 'ಅವರು ಲೌಕಿಕತೆಗಾಗಿ ಅಲ್ಲ, ಬದಲಾಗಿ ಕೇವಲ ದೀನಿನ ಪ್ರೀತಿಯಿಂದ ಕೆಲಸ ಮಾಡುತ್ತಾರೆ ಮತ್ತು ಕಠಿಣ ಪರಿಶ್ರಮದಿಂದ ಸೇವೆ ಸಲ್ಲಿಸುತ್ತಾರೆ.' ಇಂತಹ ನಿಷ್ಠಾವಂತ ಸಹಾಯಕರನ್ನು ಹಝ್ರತ್ ಮಸೀಹ್ ಮೌಊದ್[ಅ] ಅಲ್ಲಾಹನ ಅನುಗ್ರಹ ಎಂದು ಕರೆದರು ಹಾಗೂ ಅವರ ಸೇವೆಗಳನ್ನು ತಮ್ಮ ಧಾರ್ಮಿಕ ಕಾರ್ಯಗಳ ಪೂರ್ಣಗೊಳಿಸುವಿಕೆಗೆ ಪೂರಕವಾದ ಕಾರಣಗಳೆಂದು ಪರಿಗಣಿಸಿದರು.

ಹಝ್ರತ್ ಶೇಖ್ ಯಾಕೂಬ್ ಅಲಿ ಸಾಹಿಬ್ ಇರ್ಫಾನಿ[ರ] ವಿವರಿಸುತ್ತಾರೆ: ಹಝ್ರತ್ ಮಸೀಹ್ ಮೌಊದ್[ಅ] ಸೇವಕರ ಸಣ್ಣ–ಪುಟ್ಟ ಕೆಲಸಗಳನ್ನೂ ಕೂಡ ಗೌರವಿಸುತ್ತಿದ್ದರು ಮತ್ತು ಅವರನ್ನು ಪ್ರೋತ್ಸಾಹಿಸುತ್ತಿದ್ದರು. ಯಾವುದಾದರೂ ಪುಸ್ತಕ ಅಥವಾ ಪತ್ರಿಕೆಯನ್ನು ಶೀಘ್ರವಾಗಿ ಪ್ರಕಟಿಸುವ ಉದ್ದೇಶವಿದ್ದರೆ ಮತ್ತು ರಾತ್ರಿಗಳಲ್ಲಿ ಕೆಲಸ ನಡೆಯುತ್ತಿರುವಾಗ, ಪ್ರೆಸ್‌ನ ನೌಕರರಿಗೆ ಹಾಲು ಮತ್ತು ಇತರ ವಸ್ತುಗಳನ್ನು ವಿಶೇಷ ಕಾಳಜಿಯಿಂದ ಒದಗಿಸುತ್ತಿದ್ದರು, ವಾಡಿಕೆಗಿಂತ ಹೆಚ್ಚಿನ ಕೂಲಿ ನೀಡುತ್ತಿದ್ದರು ಮತ್ತು ಅವರ ಕಾರ್ಯವೈಖರಿಯ ಮೇಲೆ ಸಂತೋಷ ಹಾಗೂ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಿದ್ದರು.

ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: ಪ್ರವಾದಿಗಳ ಹೃದಯವು ಬಹಳ ಕೃತಜ್ಞತೆಯಿಂದ ಕೂಡಿರುತ್ತದೆ. ಹಝ್ರತ್ ಮಸೀಹ್ ಮೌಊದ್[ಅ]ರ ಪುಸ್ತಕಗಳು ಹಗಲು–ರಾತ್ರಿ ಮುದ್ರಣಗೊಳ್ಳುತ್ತಿದ್ದಾಗ ಅವರು ಅನೇಕ ರಾತ್ರಿಗಳವರೆಗೆ ನಿದ್ರಿಸುತ್ತಿರಲಿಲ್ಲ, ಆದರೆ ರಾತ್ರಿ ಯಾರಾದರೂ ಪ್ರೂಫ್ ತೆಗೆದುಕೊಂಡು ಬಂದರೆ, ಅವರ ಧ್ವನಿಗೆ ಸ್ವತಃ ಎದ್ದುಬಂದು ಪ್ರೂಫ್ ತೆಗೆದುಕೊಳ್ಳುತ್ತಿದ್ದರು ಮತ್ತು **ಜಝಾಕಲ್ಲಾಹು ಅಹ್ಸನಲ್ ಜಝಾ** ಎಂದು ಹೇಳುತ್ತಿದ್ದರು. ಅವರು ಆ ವ್ಯಕ್ತಿಯ ಕಷ್ಟವನ್ನು ಅರಿಯುತ್ತಿದ್ದರು ಮತ್ತು ದೇವನು ಅವರಿಗೆ ಉತ್ತಮ ಪ್ರತಿಫಲ ನೀಡಲಿ ಎಂದು ಹೇಳುತ್ತಿದ್ದರು. ಇದರಿಂದ ಪ್ರವಾದಿಗಳ ಹೃದಯದಲ್ಲಿ ಇತರರ ಉಪಕಾರ ಮತ್ತು ಕಷ್ಟದ ಬಗ್ಗೆ ಬಹಳಷ್ಟು ಅರಿವು ಇರುತ್ತದೆ ಎಂಬುದು ಸ್ಪಷ್ಟವಾಗುತ್ತದೆ.

ಹಾಫಿಝ್ ನಬಿ ಬಕ್ಷ್ ಸಾಹಿಬ್ ಹೇಳುತ್ತಾರೆ: ಒಮ್ಮೆ ಹಝ್ರತ್ ಮಸೀಹ್ ಮೌಊದ್[ಅ] ತೋಟದಲ್ಲಿ ನಡೆದಾಡುತ್ತಿದ್ದರು. ಅವರ ಕೈಯಲ್ಲಿ ಬೆತ್ತದ ಊರುಗೋಲಿತ್ತು, ಅದು ಮರದಲ್ಲಿ ಸಿಕ್ಕಿಹಾಕಿಕೊಂಡಿತು. ಅನೇಕ ಸಹಾಬಿಯರು ಅದನ್ನು ಕೆಳಗಿಳಿಸಲು ಪ್ರಯತ್ನಿಸಿದರು ಆದರೆ ಯಶಸ್ವಿಯಾಗಲಿಲ್ಲ. ಕೊನೆಗೆ ನಬಿ ಬಕ್ಷ್ ಸಾಹಿಬ್ ಮರವನ್ನೇರಿ ಊರುಗೋಲನ್ನು ತೆಗೆದರು. ಹಝ್ರತ್ ಮಸೀಹ್ ಮೌಊದ್[ಅ] ಇದರಿಂದ ಬಹಳ ಸಂತೋಷಪಟ್ಟರು ಮತ್ತು ಪದೇ ಪದೇ ಅವರನ್ನು ಪ್ರಶಂಸಿಸುತ್ತಾ ಹೀಗೆ ಹೇಳಿದರು: "ಮಿಯಾನ್ ನಬಿ ಬಕ್ಷ್ ಮರವನ್ನೇರಿ ತಕ್ಷಣ ಕೋಲನ್ನು ತೆಗೆದದ್ದು ಅದ್ಭುತವಾಗಿತ್ತು." ಹಝ್ರತ್ ಮಸೀಹ್ ಮೌಊದ್[ಅ] ಚಿಕ್ಕವರಾಗಲಿ, ದೊಡ್ಡವರಾಗಲಿ ಎಲ್ಲರನ್ನೂ ಗೌರವದಿಂದಲೇ ಸಂಬೋಧಿಸುತ್ತಿದ್ದರು.

ಡಾಕ್ಟರ್ ಮೀರ್ ಮುಹಮ್ಮದ್ ಇಸ್ಮಾಯಿಲ್ ಸಾಹಿಬ್[ರ] ವಿವರಿಸುತ್ತಾರೆ: ಹಝ್ರತ್ ಮಸೀಹ್ ಮೌಊದ್[ಅ]ರಿಗಾಗಿ ಯಾರಾದರೂ ಉಡುಗೊರೆ ತಂದರೆ ಅವರು ಬಹಳ ಕೃತಜ್ಞರಾಗಿರುತ್ತಿದ್ದರು ಮತ್ತು ಮನೆಯಲ್ಲೂ ಆ ವ್ಯಕ್ತಿಯ ನಿಷ್ಠೆಯ ಕುರಿತು ಪ್ರಸ್ತಾಪಿಸುತ್ತಿದ್ದರು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್[ರ] ಮತ್ತೊಂದು ಘಟನೆಯನ್ನು ವಿವರಿಸಿದ್ದಾರೆ: ಡಾಕ್ಟರ್ ಖಲೀಫಾ ರಶೀದುದ್ದೀನ್ ಸಾಹಿಬ್ ಆಗ್ರಾದಿಂದ ಖಾದಿಯಾನಿಗೆ ಬರುವಾಗ ಹಝ್ರತ್ ಮಸೀಹ್ ಮೌಊದ್[ಅ]ರಿಗಾಗಿ ಒಂದು ವಿಧದ ಸಿಹಿ ತರುತ್ತಿದ್ದರು. ಒಮ್ಮೆ ಹಝ್ರತ್ ಮಸೀಹ್ ಮೌಊದ್[ಅ] ಬೆಳಿಗ್ಗೆಯಿಂದ ಏನೂ ತಿಂದಿರಲಿಲ್ಲ. ಆದರೆ ಆಗ್ರಾದಿಂದ ತಮಗಾಗಿ ಸಿಹಿತಿಂಡಿ ತರಲಾಗಿದೆ ಎಂದು ತಿಳಿದಾಗ, ಬಹಳ ಸಂತೋಷಪಟ್ಟರು, ಅದನ್ನು ಇಷ್ಟಪಟ್ಟರು, ಪ್ರಶಂಸಿಸಿದರು ಮತ್ತು ಕೆಲವನ್ನು ತಮಗಾಗಿ ಇಟ್ಟುಕೊಳ್ಳಲು ಹೇಳಿದರು.

ಗುರುದಾಸ್‌ಪುರದಲ್ಲಿ ಕರಮ್ ದೀನ್ ಮೊಕದ್ದಮೆಯ ಸಮಯದಲ್ಲಿ ಆರ್ಥಿಕ ಮುಗ್ಗಟ್ಟಾದಾಗ, ಡಾಕ್ಟರ್ ಖಲೀಫಾ ರಶೀದುದ್ದೀನ್ ಸಾಹಿಬ್[ರ] ತಮ್ಮ ಮನೆಯಲ್ಲಿದ್ದ ಸಂಪತ್ತನ್ನು ಕಳುಹಿಸಿದರು ಮತ್ತು ಮುಂದಿನ ಆದಾಯವನ್ನೂ ಕಳುಹಿಸುತ್ತಿದ್ದರು. ಹಝ್ರತ್ ಮಸೀಹ್ ಮೌಊದ್[ಅ] ಇವರ ಈ ತ್ಯಾಗವನ್ನು ಅರಿತು ಅವರಿಗೆ ಹೀಗೆ ಬರೆದರು: "ನೀವು ತ್ಯಾಗದ ಮಿತಿಯನ್ನು ತಲುಪಿದ್ದೀರಿ, ಇನ್ನು ಮುಂದೆ ಚಂದಾ ನೀಡುವ ಅಗತ್ಯವಿಲ್ಲ." ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: "ಮೊದಲು ಅವರು ಕರ್ತವ್ಯವೆಂದು ಚಂದಾ ನೀಡುತ್ತಿದ್ದರು ಮತ್ತು ಅನಂತರ ಕೃತಜ್ಞತೆಯ ಸಂಕೇತವಾಗಿಯೂ ನೀಡುತ್ತಲೇ ಇದ್ದರು."

ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್[ಅ] ತಮ್ಮ ಸಂತತಿಯನ್ನು 'ವಸಿಯ್ಯತ್'ನ ಚಂದಾದಿಂದ ವಿನಾಯಿತಿ ನೀಡಿದ್ದರು, ಆದರೆ ನನಗೆ ಹಝ್ರತ್ ಪೈಗಂಬರ್[ಸ]ರ "ಅಫಲಾ ಅಕೂನ ಅಬ್ದನ್ ಶಕೂರಾ" ಎಂಬ ನುಡಿ ನೆನಪಿಗೆ ಬಂದಿತು, ಅಂದರೆ "ನಾನು ಕೃತಜ್ಞ ದಾಸನಾಗಬಾರದೇ?". ಹಾಗಾಗಿ ನಾನು ಕೃತಜ್ಞತೆಯ ಸಂಕೇತವಾಗಿ ಚಂದಾ ನೀಡಲು ಪ್ರಾರಂಭಿಸಿದೆ ಮತ್ತು ನನ್ನ ಚಂದಾವು ಮೂಸಿಗಳಿಗಿಂತಲೂ (ವಸಿಯ್ಯತ್ ಮಾಡಿದವರಿಗಿಂತಲೂ) ಹೆಚ್ಚಾಯಿತು. ನಂತರ ನನಗೆ ಮಸೀಹ್ ಮೌಊದರ ನಿಧನದ ಕೆಲವು ದಿನಗಳ ನಂತರ ಲಭಿಸಿದ ಒಂದು ದಿವ್ಯವಾಣಿ ನೆನಪಿಗೆ ಬಂತು: **"ಇಅ್‌ಮಲೂ ಆಲ ದಾವೂದ ಶುಕ್ರಾ"**. ಹಾಗಾಗಿ ನಾನು ಕೃತಜ್ಞತೆಯ ರೂಪದಲ್ಲಿ ಬಹಳಷ್ಟು ಚಂದಾ ನೀಡಿದೆ.

(ಹುಝೂರ್ ಹೇಳಿದರು:) ಹಝ್ರತ್ ಮಸೀಹ್ ಮೌಊದ್(ಅ)ರ ವಸಿಯ್ಯತ್‌ನ ಪ್ರಕಾರ, ವಿನಾಯಿತಿಯು ಕೇವಲ ಅವರ ಐವರು ಮಕ್ಕಳಿಗೆ ಮಾತ್ರ ಇತ್ತು, ಅವರ ಸಂತತಿಗೆ, ಪುತ್ರರ ಪತ್ನಿಯರಿಗೆ ಅಥವಾ ಪುತ್ರಿಯರ ಪತಿಯರಿಗೆ ಇರಲಿಲ್ಲ; ಯಾರು ವಸಿಯ್ಯತ್ ಮಾಡುತ್ತಾರೋ ಅವರು ವಸಿಯ್ಯತ್‌ನ ಚಂದಾ ಮತ್ತು ಆಸ್ತಿಯ ಪಾಲನ್ನು ನೀಡಬೇಕಾಗುತ್ತದೆ. 'ಬಹಿಶ್ತಿ ಮಖ್‌ಬರಾ'ದಲ್ಲಿ ದಫನ್ ಮಾಡುವ ಅನುಮತಿಯೂ ಈ ಐವರು ಮಕ್ಕಳಿಗೆ ಮಾತ್ರ ಇತ್ತು; ಆದಾಗ್ಯೂ ಹಝ್ರತ್ ಅಮ್ಮಾಜಾನ್ ಮತ್ತು ಹಝ್ರತ್ ಮಸೀಹ್ ಮೌಊದ್(ಅ)ರ ಮಕ್ಕಳು ಅಪಾರ ತ್ಯಾಗಗಳನ್ನು ಮಾಡಿದರು. ಹಝ್ರತ್ ಮುಸ್ಲಿಹ್ ಮೌಊದ್(ರ)ರ ನಂತರ ಯಾವುದೇ ಖಲೀಫರಿಗೆ ಅಥವಾ ಕುಟುಂಬದ ಸದಸ್ಯರಿಗೆ ಈ ವಿನಾಯಿತಿ ಇರಲಿಲ್ಲ; ಎಲ್ಲರೂ ವಸಿಯ್ಯತ್ ಮಾಡಿದರು, ಚಂದಾ ನೀಡಿದರು ಮತ್ತು ಇತರ ಆರ್ಥಿಕ ಯೋಜನೆಗಳಲ್ಲೂ ತಮ್ಮ ಸಾಮರ್ಥ್ಯಕ್ಕನುಸಾರವಾಗಿ ಪಾಲ್ಗೊಂಡರು. ಈ ವಿನಾಯಿತಿಯು ಕೇವಲ ಆ ಐವರು ಮಕ್ಕಳಿಗೆ ಮಾತ್ರ ಇತ್ತು, ಇದನ್ನೇಕೆ ನಾನು ಸ್ಪಷ್ಟಪಡಿಸುತ್ತಿದ್ದೇನೆ ಎಂದರೆ, ಕೆಲವು ಕಡೆಗಳಿಂದ ನನಗೆ ಈ ಬಗ್ಗೆ ಪ್ರಶ್ನೆ ಬಂದಿತ್ತು.

ಹಝ್ರತ್ ಮಿಯಾನ್ ಸದರುದ್ದೀನ್ ಸಾಹಿಬ್ ವಿವರಿಸುತ್ತಾರೆ: ಒಮ್ಮೆ ಹಝ್ರತ್ ಮಸೀಹ್ ಮೌಊದ್(ಅ) ಚರಾಗ್ ಎಂಬ ಪರಿಚಾರಕನಿಗೆ ಹಣ ನೀಡಿ ಸಿಹಿತಿನಿಸುಗಳನ್ನು ತರಿಸಿದರು. ತಿನಿಸುಗಳನ್ನು ತರಲಾದಾಗ ಹಝ್ರತ್ ಮಸೀಹ್ ಮೌಊದ್(ಅ) ಅದನ್ನು ಎರಡು ಭಾಗಗಳಾಗಿ ವಿಂಗಡಿಸಿ ಒಂದು ಭಾಗವನ್ನು ಅವನಿಗೆ ನೀಡಲು ಮುಂದಾದರು. ಅವನು ಅದನ್ನು ಪಡೆಯಲು ನಿರಾಕರಿಸಿದಾಗ ಅವರು ಹೀಗೆ ಹೇಳಿದರು: "ಹಣ ನನ್ನದಾಗಿತ್ತು ಆದರೆ ಶ್ರಮ ನಿನ್ನದಾಗಿದೆ, ನೀನು ತಂದಿದ್ದೀಯಾ, ಆದ್ದರಿಂದ ಅರ್ಧ ನಿನ್ನದಾಗಿದೆ." ಇದು ಕೂಡ ಇತರರ ಕೆಲಸವನ್ನು ಗೌರವಿಸುವ ಮತ್ತು ಕೃತಜ್ಞತೆ ಸಲ್ಲಿಸುವ ಒಂದು ವಿಧಾನವಾಗಿತ್ತು.

ಒಂದು ಸಂದರ್ಭದಲ್ಲಿ ಬಟಾಲಾದಲ್ಲಿ ಸ್ನೇಹಿತರು ಚಹಾದ ವ್ಯವಸ್ಥೆ ಮಾಡಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ಚಹಾ ನೀಡಿದವರ ಬಗ್ಗೆ ವಿಚಾರಿಸಿದರು ಮತ್ತು ಅವರ ಸೇವೆಗೆ ಕೃತಜ್ಞತೆ ಸಲ್ಲಿಸಿದರು. ನಂತರ ಪತ್ರಿಕೆಯಲ್ಲೂ ಆ ಜನರ ಸೇವೆಯನ್ನು ಘೋಷಿಸಿ ಕೃತಜ್ಞತೆ ಸಲ್ಲಿಸಿದರು. ಇದರಿಂದ ತಿಳಿಯುವುದೇನೆಂದರೆ, ಹಝ್ರತ್ ಮಸೀಹ್ ಮೌಊದ್(ಅ) ಯಾರದ್ದೇ ಸಣ್ಣ–ಪುಟ್ಟ ಸೇವೆಯನ್ನೂ ನಿರ್ಲಕ್ಷಿಸುತ್ತಿರಲಿಲ್ಲ, ಅದನ್ನು ಗೌರವಿಸುತ್ತಿದ್ದರು ಮತ್ತು ಕೃತಜ್ಞತೆ ಸಲ್ಲಿಸುತ್ತಿದ್ದರು.

ಅಲ್ಲಾಹನು ನಮಗೂ ಕೃತಜ್ಞತೆಯ ಉನ್ನತ ಗುಣಮಟ್ಟವನ್ನು ಅಳವಡಿಸಿಕೊಳ್ಳುವ ಸೌಭಾಗ್ಯವನ್ನು ಕರುಣಿಸಲಿ.

——————————*****——————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُبِالْعَدْلِ وَالْاِحْسَانِ وَاِيْتَاءِ ذِى الْقُرْبٰى

وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*** *(atba)*

At, ***'Masjid Mubarak',*** *Islamabad, Tilford,* U.K. On 21-08-2026

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim | ***Layout:*** Basheer K.P. Manjeshwar

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon